ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು.

## ಸೆಷನ್ಸ್ ಕೇಸ್ ನಂಬ್ರ 5/2024

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀ ಸಂತೋಷ್ ಶೆಟ್ಟಿ | ಪ್ರಾ.ಸಾಃ 2 |
| ತಂದೆಯ ಹೆಸರು | : | ರಾಮಣ್ಣ ಶೆಟ್ಟಿ | ಚಾಸಾಃ 2 |
| ಪ್ರಾಯ | : | 40 ವರ್ಷ | ದಿನಾಂಕಃ **12.06.2024** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಖಾಸಗಿ ಕಂಪೆನಿಯಲ್ಲಿ ಹೆಚ್.ಆರ್. | |
| ವಾಸಸ್ಥಳ | : | ಕೊಲ್ನಾಡು, ಮುಲ್ಕಿ ತಾಲೂಕು. | |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ಪ್ರಾ.ಸಾ.1, ಚಾ.ಸಾ.3 ಮತ್ತು ಚಾ.ಸಾ.7 ನನ್ನ ಸಂಬಂಧಿಕರು ಮತ್ತು ನೆರೆಕರೆಯವರು.

2. ದಿನಾಂಕಃ 17.09.2023 ರಂದು ಭಾನುವಾರ ಆದ ಕಾರಣ ರಜಾದಿನ ಆಗಿದ್ದು, ನಾನು ಮನೆಯಲ್ಲಿದ್ದೆ. ಆ ದಿನ ಸಮಯ ಸುಮಾರು 12.30 ಗಂಟೆಗೆ ಅಪರಿಚಿತರು ಬಂದು ಪ್ರಾ.ಸಾ.1 ರವರ ಕರಿಮಣಿ ಸರವನ್ನು ಸುಲಿಗೆ ಮಾಡಿರುವ ವಿಷಯ ತಿಳಿದು ನಾನು ಸ್ಥಳಕ್ಕೆ ಹೋದೆ. ನಾನು ಮನೆಗೆ ಹೋದಾಗ ಘಟನೆಯ ವಿಷಯವನ್ನು ಪ್ರಾ.ಸಾ.1 ರವರು ನನಗೆ ತಿಳಿಸಿರುತ್ತಾರೆ. ನಂತರ ಪೊಲೀಸರು ಸ್ಥಳಕ್ಕೆ ಬಂದು ಮಧ್ಯಾಹ್ನ 2.50 ರಿಂದ 3.45 ರ ತನಕ ಪ್ರಾ.ಸಾ.1 ರವರ ಮನೆಯ ಸಿಟೌಟ್ ನಲ್ಲಿ ಮಹಜರು ಬರೆದಿರುತ್ತಾರೆ ಮತ್ತು ನನ್ನ ಹೇಳಿಕೆ ಪಡೆದಿರುತ್ತಾರೆ. ಸದರಿ ಸ್ಥಳವನ್ನು ಪ್ರಾ.ಸಾ.1 ರವರು ಪೊಲೀಸರಿಗೆ ತೋರಿಸಿಕೊಟ್ಟಿದ್ದು, ಸದರಿ ಮಹಜರಿಗೆ ನಾನು ಸ್ಥಳದಲ್ಲಿದ್ದು, ಸಹಿ ಹಾಕಿರುತ್ತೇನೆ. ಸದರಿ ಮಹಜರನ್ನು ಈಗಾಗಲೇ ನಿ.ಪಿ.2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2(ಬಿ) ಎಂದು ಗುರುತಿಸಲಾಯಿತು. ಪೊಲೀಸರು ಸ್ಥಳದಲ್ಲಿ ನಿ.ಪಿ.3 ರಂತೆ

ನಕಾಶೆಯನ್ನು ತಯಾರಿಸಿರುತ್ತಾರೆ, ಅದಕ್ಕೆ ನಾನು ಸಹಿ ಹಾಕಿರುತ್ತೇನೆ ಮತ್ತು ನಿ.ಪಿ.3 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.3(ಬಿ) ಎಂದು ಗುರುತಿಸಲಾಯಿತು. ಮಹಜರು ವೇಳೆ ಪೊಲೀಸರು ಪ್ರಾ.ಸಾ.1 ರವರ ಕೈಯಲ್ಲಿ ಉಳಿದುಕೊಂಡಿದ್ದ ಕರಿಮಣಿ ಸರದ ತುಂಡನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ. ಅದರ ಫೋಟೋ ನೋಡಿದರೆ ಗುರುತಿಸಬಲ್ಲೆ. ನಿ.ಪಿ.8 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ 1, 2 ಮತ್ತು 6 ನೇ ಆರೋಪಿತರ ಪರ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಶ್ರೀ ಜಿ.ವಿ.ಜಿ. ವಕೀಲರಿಂದಃ**

3. ನಮ್ಮ ಮನೆಯಿಂದ ಪ್ರಾ.ಸಾ.1 ರವರ ಮನೆ 5 ನಿಮಿಷ ನಡಿಗೆಯ ಅಂತರದಲ್ಲಿ ಇದೆ. ಆ ರೀತಿ ನಮ್ಮ ಮನೆಯಿಂದ ಹತ್ತಿರದಲ್ಲಿ ಬೇರೆ ಮನೆಗಳು ಇವೆ ಎಂದರೆ ಸರಿ. ಸದರಿ ನೆರೆಕರೆಯ ಮನೆಯವರು ಸಹ ಘಟನಾ ಸ್ಥಳಕ್ಕೆ ನಂತರ ಬಂದಿದ್ದರು. ಪ್ರಾ.ಸಾ.1 ರವರು ನನಗೆ ಘಟನೆಯ ಬಗ್ಗೆ ತಿಳಿಸಿರುತ್ತಾರೆ. ನಮ್ಮ ಮನೆಯಿಂದ ಪ್ರಾ.ಸಾ.1 ರವರ ಮನೆಯ ಪಕ್ಕ ಇರುವ ರಸ್ತೆ ಕಾಣುತ್ತದೆ. ಪ್ರಾ.ಸಾ.1 ರವರ ಮನೆಯ ಪಕ್ಕ ಯಾರಾದರೂ ನಿಂತ ಬಗ್ಗೆ ನಾನೇನು ನೋಡಿಲ್ಲ.

4. ಮಹಜರಿಗೆ ನಾನು ಸ್ಥಳದಲ್ಲೇ ಸಹಿ ಹಾಕಿರುತ್ತೇನೆ. ಆ ದಿನ ನಾನು ಸ್ಥಳಕ್ಕೆ ಹೋಗಿಲ್ಲ ಮತ್ತು ಪೊಲೀಸು ಠಾಣೆಯಲ್ಲಿ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಘಟನೆಯ ದಿನ ನಾನು ಮನೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳಕ್ಕೆ ಬರಲು ನನಗೆ ಪೊಲೀಸರು ನೋಟೀಸು ನೀಡಿರುತ್ತಾರೆ. ಸದರಿ ಯಾವುದೇ ಘಟನೆ ಆಗಿಲ್ಲ ಮತ್ತು ಈ ಆರೋಪಿಗಳಿಗೂ, ಘಟನೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಎಲ್ಲಾ

ದಾಖಲೆಗಳಿಗೂ ನಾನು ಪೊಲೀಸು ಠಾಣೆಯಲ್ಲಿ ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 3 ಮತ್ತು 5 ನೇ ಆರೋಪಿ ಪರ ಶ್ರೀ ವಿ.ಆರ್.ಎ. ವಕೀಲರಿಂದಃ</u>**

(ಉಳಿದ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ನುಡಿಯುತ್ತಾರೆ.)

**<u>ಮರುವಿಚಾರಣೆಃ</u> ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.